(ಇಂದು ದಿನಾಂಕಃ 30-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃ ಶ್ರೀ ಆರ್.ವಿ.ಬಿ. ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ಓದಿದ್ದೇನೆ. ನಾನು ಮುಂಬೈನ ಠಾಣಾದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ಮಾಹಿಯನ್ನು ನಮ್ಮ ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಗೆ ನಾನು ಮುಂಬೈನ ಠಾಣಾದಲ್ಲಿ ವಾಸವಾಗಿದ್ದೇನೆ ಎಂದು ಹೇಳಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಮುಂಬೈನಲ್ಲಿ ವಾಸವಾಗಿದ್ದೇನೆ ಎಂದು ನನ್ನ ವಿಳಾಸದಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಮುಂಬೈನಲ್ಲಿ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮನೆಯಲ್ಲಿಯೇ ಅಕ್ಕಸಾಲಿಗ ಕೆಲಸ ಮಾಡುತ್ತೇನೆ. ನಾನು 2001 ರಿಂದ ಮುಂಬೈನಲ್ಲಿ ಅಕ್ಕಸಾಲಿಗ ಕೆಲಸ ಮಾಡಿಕೊಂಡು ಬಂದಿದ್ದೇನೆ. ಮುಂಬೈಗೆ ಹೋಗುವ ಮುಂಚೆ ನಾನು ಸ್ವಲ್ಪ ಕಾಲ ಕೊಲ್ಲಾಪುರದಲ್ಲಿ ವಾಸವಾಗಿದ್ದೆ ಎಂದರೆ ಸರಿ. ಕೊಲ್ಲಾಪುರದಲ್ಲಿಯೂ ಸಹ ನಾನು ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದೆ. ನನ್ನ ಹೆಂಡತಿ ನನ್ನೊಂದಿಗೆ ಮುಂಬೈಯಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. ನನ್ನ ಹೆಂಡತಿ ಮುಂಬೈನಲ್ಲಿ ಒಂದು ಗ್ರಾಮ ಚಿನ್ನದ ಆಭರಣಗಳ ವ್ಯಾಪಾರ ಮಾಡುತ್ತಾಳೆ ಎಂದರೆ ಸರಿ. ನನಗೆ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಮಗಳು ಮದುವೆಯಾಗಿ ಕೊಲ್ಲಾಪುರದಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. ನನ್ನ ಮಗ ಮುಂಬೈನಲ್ಲಿ ನನ್ನ ಜೊತೆ ವಾಸವಾಗಿದ್ದಾನೆ. ನನ್ನ, ನನ್ನ ಹೆಂಡತಿ ಮತ್ತು ನನ್ನ ಮಗನಿಗೆ ಸಂಬಂಧಪಟ್ಟ ಆಧಾರ ಕಾರ್ಡ ಮತ್ತು ಪಾನ್ ಕಾರ್ಡ ಮುಂಬೈನ ವಿಳಾಸಕ್ಕೆ ಸಂಬಂಧಿಸಿವೆ ಎಂದರೆ ಸರಿ.

ನನ್ನ ಜನ್ಮ ದಿನಾಂಕ 12-05-1964. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ 2 ಕ್ರಯಪತ್ರಗಳ ಬಗ್ಗೆ ನಮೂದಿಸಿದ್ದೇನೆ ಎಂದರೆ ಸರಿ. ನಿ.ಪಿ. 5 ಕ್ರಯಪತ್ರ ಆಗುವ ಸಮಯದಲ್ಲಿ ನನಗೆ 4 ಅಥವಾ 5 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನಿ.ಪಿ. 6 ಆಗುವ ಸಮಯದಲ್ಲಿ ನನಗೆ 11 ವರ್ಷ

ವಯಸ್ಸಾಗಿತ್ತು ಎಂದರೆ ಸರಿ.  ನಿ.ಪಿ.5 ಮತ್ತು ನಿ.ಪಿ.6 ಆಗುವ ಸಮಯದಲ್ಲಿ ನಾನು ಉಪನೋಂದಣಾಧಿಕಾರಿಗಳ ಕಚೇರಿಗೆ ಹೋಗಿರಲಿಲ್ಲ, ಆದ್ದರಿಂದ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ದೊಡ್ಡ ಅಣ್ಣ ಇದ್ದರು ಎಂದು ಹೇಳುತ್ತಾರೆ. ನಿ.ಪಿ.5 ರಲ್ಲಿರುವ ದಾವಾ ಆಸ್ತಿಯನ್ನು ಪ್ರತಿವಾದಿ ನಂ.1, ರೇಖಾಬಾಯಿ ಮತ್ತು ರಾಧಾಬಾಯಿ ಜಂಟಿಯಾಗಿ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರಿಗೆ ಸ್ವತಂತ್ರ ಆದಾಯ ಇರಲಿಲ್ಲ ಎಂದು ಹೇಳುತ್ತಾರೆ. ನಿ.ಪಿ.7 ರ ಪ್ರಕಾರ 1 ನೇ ಪ್ರತಿವಾದಿ ಖರೀದಿ ಮಾಡಿದವರು, ರೇಖಾಬಾಯಿ ಮತ್ತು ರಾಧಾಬಾಯಿ ಮಾರಾಟ ಮಾಡಿದವರು. ನಿ.ಪಿ. 7 ರ ಪ್ರಕಾರ ಆಸ್ತಿ 1 ನೇ ಪ್ರತಿವಾದಿಗೆ ಮಾತ್ರ ಬಂದಿದೆ ಎಂದರೆ ಸರಿ. ಅದೇ ಆಸ್ತಿಯನ್ನು 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿ. ನಿ.ಪಿ. 9 ದಾನಪತ್ರದ ದೃಢೀಕೃತ ನಕಲು ಎಂದರೆ ಸರಿ. ನಿ.ಪಿ. 9 ಆಗುವ ಸಮಯದಲ್ಲಿ ನಾನು ಉಪನೋಂದಣಾಧಿಕಾರಿಗಳ ಕಚೇರಿಗೆ ಹೋಗಿಲ್ಲ ಹಾಗೂ ಸಹಿ ಮಾಡಿಲ್ಲ ಎಂದರೆ ಸರಿ. ದಾನಪತ್ರ ಆಗುವ ಸಮಯದಲ್ಲಿ ಏನೆಲ್ಲಾ ವ್ಯವಹಾರ ನಡೆದಿತ್ತು ಎಂದು ವೈಯಕ್ತಿಕ ಮಾಹಿತಿ ನನಗಿಲ್ಲ. 1 ನೇ ಪ್ರತಿವಾದಿ ಈಗ ಜೀವಿತವಾಗಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ 1 ನೇ ಪ್ರತಿವಾದಿ ಹಾಕಿದಂತಹ ಪ್ರತಿವಾದ ಪತ್ರ ಹಾಗೂ ಅದರಲ್ಲಿ ಸಲ್ಲಿಸಿರುವ ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ.

ಈ ಹಿಂದೆ ನಾನು ಒಂದು ಸೋಡಾ ಫ್ಯಾಕ್ಟರಿಯನ್ನು ಆರಂಭಿಸಿದ್ದೆ ಎಂದರೆ ಸರಿ. ಅದನ್ನು ಪ್ರಾರಂಭಿಸಲು ನಾನು ರೂ. 50,000-00 ಸಾಲ ಮಾಡಿಕೊಂಡಿದ್ದೆ ಎಂದರೆ ಸರಿ. ಸದರಿ ಸಾಲವನ್ನು ನಮ್ಮ ತಂದೆ ಬಡ್ಡಿ ಸಮೇತ ರೂ. 99,000-00 ತುಂಬಿ ತಿರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ.  ನಮ್ಮ ತಾಯಿಗೆ ಆರ್ಥಿಕ ಸಹಾಯ ಮಾಡಿದ್ದೇನೆ ಎಂದು ತೋರಿಸಲು ದಾಖಲಾತಿಗಳು ಇಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಕಂದಾಯವನ್ನು 2 ನೇ ಪ್ರತಿವಾದಿ ಕಟ್ಟುತ್ತಿದ್ದಾರೆ ಎಂದರೆ ಸರಿ. ನಾನು 2 ಬಾರಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಕಟ್ಟಿದ್ದೇನೆ. ನಾನು ಕಂದಾಯ ಕಟ್ಟಿದ್ದೇನೆ ಎಂದು ತೋರಿಸುವ ರಶೀದಿಗಳು ನನ್ನ ಬಳಿ ಇಲ್ಲ. ದಾವಾ ಆಸ್ತಿಯ ಮನೆಗೆ ವಿದ್ಯುಚ್ಛಕ್ತಿ ಸಂಪರ್ಕ ಇದ್ದು





ವಿದ್ಯುಚ್ಛಕ್ತಿ ಬಿಲ್‌ನ್ನು 2 ನೇ ಪ್ರತಿವಾದಿ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 3 ನೇ ಪ್ರತಿವಾದಿ ಕಟ್ಟುತ್ತಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೂಲ ಮನೆಯೊಂದಿಗೆ 3 ಬಾಡಿಗೆ ಕೊಡುವಂತಹ ಚಿಕ್ಕ ಮನೆಗಳು

ಇವೆ ಎಂದರೆ ಸರಿ. ಸದರಿ ಮನೆಗಳಲ್ಲಿ ಮಂಗಲಾ, ಗಣೇಶ ಮತ್ತು ಗೀತಾ ಎನ್ನುವವರು ಬಾಡಿಗೆ ಇದ್ದಾರೆ ಎಂದರೆ ಸರಿ. ಸದರಿ ಮೂವರು 2 ನೇ ಪ್ರತಿವಾದಿಗೆ ಬಾಡಿಗೆ ಹಣ ಕೊಡುತ್ತಾರೆ ಎಂದರೆ ಸರಿ. ಮುಂಚೆ ಸದರಿಯವರು 1 ನೇ ಪ್ರತಿವಾದಿಗೆ ಬಾಡಿಗೆ ಹಣ ಕೊಡುತ್ತಿದ್ದರು ಎಂದರೆ ಸರಿ.

ಈಗ 1 ನೇ ಪ್ರತಿವಾದಿಯ ಯೋಗಕ್ಷೇಮ ಮತ್ತು ಆಗು-ಹೋಗುಗಳನ್ನು 2 ನೇ ಪ್ರತಿವಾದಿ ನೋಡಿಕೊಳ್ಳುದ್ದಾಳೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಮುಂಚೆ 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಳು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ಗಂಡ ಮೃತಪಟ್ಟಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಗೋವಾದಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. 4 ನೇ ಪ್ರತಿವಾದಿ ಗೋವಾದಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. 5 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. ಇನ್ನೊಬ್ಬ ನನ್ನ ಸಹೋದರ ಸುಧನ್ ಮೃತಪಟ್ಟಿದ್ದು ಆತನ ಹೆಂಡತಿ ಇನ್ನೊಂದು ಮದುವೆಯಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ. 6 ಮತ್ತು 7 ನಮ್ಮ ಸಂಪರ್ಕದಲ್ಲಿ ಇಲ್ಲ, ಅವರು ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ ಅನ್ನುವುದು ಸರಿಯಲ್ಲ, ಸಾಕ್ಷಿ ಮುಂದುವರಿದು ಅವರು ಪೂಣಾದಲ್ಲಿ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ. 6 ಮತ್ತು 7 ಇವರನ್ನು ನಾನು ಕೊನೆಯಬಾರಿಗೆ 2001 ರಲ್ಲಿ ಭೇಟಿಯಾಗಿದ್ದೆ. ಅಲ್ಲಿಂದ ಇಲ್ಲಿಯವರೆಗೆ ಸದರಿಯವರು ನನ್ನ ಸಂಪರ್ಕದಲ್ಲಿ ಇಲ್ಲ. ನಮ್ಮ ತಂದೆ ಮುಂಚೆ ಸುಂಕೇರಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಮ್ಮ ತಂದೆ ಸುಂಕೇರಿಯಲ್ಲಿ ವಾಸವಾಗಿದ್ದಾಗ ಬೇರೆ ಬೇರೆ ಕಡೆಯಲ್ಲಿ ಆಸ್ತಿಗಳನ್ನು ತಮ್ಮ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಂಕಿಕೊಡ್ಲ ಗ್ರಾಮದಲ್ಲಿ 2 ಎಕರೆ ಜಮೀನನ್ನು ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ. ಅದೇ ರೀತಿ ಹಬ್ಬುವಾಡದಲ್ಲಿ ನಮ್ಮ ತಂದೆ 9 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ. ನನ್ನ



ಸಹೋದರ ಸುಧನ್ ವಿದೇಶಕ್ಕೆ ಹೋಗುತ್ತೇನೆ ಎಂದು ನಮ್ಮ ತಂದೆಗೆ ಹೇಳಿದಾಗ ಬಂಕಿಕೊಡ್ಲ ಗ್ರಾಮದಲ್ಲಿ ತಾವು ತೆಗೆದುಕೊಂಡ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಿ.ಪಿ.5 ಮತ್ತು ನಿ.ಪಿ. 6 ರ ಕ್ರಯಪತ್ರಗಳ ದೃಢೀಕೃತ ನಕಲುಗಳನ್ನು ನಾನು ಓದಿಲ್ಲ. ನಿ.ಪಿ.5 ಮತ್ತು ನಿ.ಪಿ.6 ರ ಮೂಲ ಕ್ರಯಪತ್ರಗಳು 2 ನೇ ಪ್ರತಿವಾದಿಯ ಬಳಿ ಇವೆ. ನಿ.ಪಿ.5 ಮತ್ತು ನಿ.ಪಿ. 6 ರಲ್ಲಿ ಪ್ರತಿವಾದಿ ನಂ.2 ಇವರು ಯಾವ ರೀತಿಯಾಗಿ ಯಾರಿಗೆ ಹಣ ಕೊಟ್ಟಿದ್ದಾರೆಂದು ಬರೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ನಮ್ಮ ತಂದೆ 1 ನೇ ಪ್ರತಿವಾದಿಯ ಹೆಸರಿಗೆ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಕ್ರಯದ ಹಣವನ್ನು ಸಂದಾಯ ಮಾಡಿದ್ದರು ಎಂದು ತೋರಿಸುವ ದಾಖಲಾತಿಗಳು ನನ್ನ ಬಳಿ ಇಲ್ಲ. ದಾವಾ ಆಸ್ತಿಗಳ ಕ್ರಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮತ್ತು ಕ್ರಯದ ಹಣಕ್ಕೆ ಸಂಬಂಧಪಟ್ಟಂತೆ ಮೌಖಿಕವಾಗಿ ಹೇಳಿದ್ದನ್ನು ಬಿಟ್ಟು ದಾಖಲಾತಿಗಳು ಇಲ್ಲ ಎಂದರೆ ಸರಿ. ನಿ.ಪಿ. 9 ರ ಪ್ರಕಾರ ದಾವಾ ಸ್ವತ್ತುಗಳು 2 ನೇ ಪ್ರತಿವಾದಿಗೆ ಮಾತ್ರ ಸಂಬಂಧಪಟ್ಟಿವೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಧನೆ ಮಾಡಿ ಹಕ್ಕನ್ನು ಪಡೆಯುವದಕ್ಕೋಸ್ಕರ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ತಾಯಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಸದ್ರಿಯವರು ಕಾನೂನುಬದ್ಧವಾಗಿ 2 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ್ದು ನನಗೆ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಮತ್ತು ದಾವಾಪತ್ರದಲ್ಲಿ 1975 ರಲ್ಲಿ ಕುಟುಂಬ ವ್ಯವಸ್ಥಾ ಪತ್ರ ಆಗಿವೆ ಎಂದು ತೋರಿಸಲು ದಾಖಲಾತಿಗಳು ಇದ್ದುದ್ದರ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳು ಸಂಬಂಧಿಸಿದ್ದು ಎಂದು ಗೊತ್ತಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ ಸೇರಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯೊಂದಿಗೆ ನನ್ನ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ನಾನು ಮತ್ತು 3 ನೇ ಪ್ರತಿವಾದಿ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನಗೆ ದಾವೆಯಲ್ಲಿ ಸಹಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.



**(2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ